ಎಸ್.ಸಿ.ನಂ.137/2020
ಚಾ.ಸಾ.3/ಪ್ರಾ.ಸಾ.1

**ತಾಃ10.07.2023 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ ಎಮ್ ಪಿ ವಕೀಲರಿಂದಃ**

ನಾನು ಪ್ರತಿ ಶನಿವಾರ, ಭಾನುವಾರ ನಮ್ಮ ಅತ್ತೆಯ ಮನೆಗೆ ಭೇಟಿ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿಃ14.02.2020 ಶುಕ್ರವಾರ ಆಗಿರುತ್ತದೆ. ನನ್ನ ಯಜಮಾನರು ಪ್ರಸನ್ನ ಕುಮಾರ್ ಇವರಿಗೆ ಅವರು ತೀರಿಕೊಳ್ಳುವ 14-15 ವರ್ಷಗಳಿಂದ ಮಧ್ಯಪಾನದ ಚಟ ಇತ್ತು. ಪ್ರತಿದಿನ ಅವರು ಮಧ್ಯಪಾನ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಇತ್ತೀಚೆಗೆ ಪ್ರತಿದಿನ ಕುಡಿಯುತ್ತಿದ್ದರು ಎಂದು ನುಡಿದಿರುತ್ತಾರೆ. ದಿಃ14.02.2020 ರಂದು ನನ್ನ ಯಜಮಾನರು ಚಾಸಾ.1 ರವರ ಮನೆಯಲ್ಲಿ ಅವರ ಸ್ನೇಹಿತರೊಂದಿಗೆ ಮಧ್ಯಪಾನ ಮಾಡುತ್ತಿರುವುದನ್ನು ನಾನು ಸ್ವತಃ ನೋಡಿರುತ್ತೇನೆ. ಆ ದಿನ ಚಾಸಾ.1 ರವರ ಮನೆಯಲ್ಲಿ ನನ್ನ ಯಜಮಾನರು ಅವರ ಸ್ನೇಹಿತರೊಂದಿಗೆ ಮಧ್ಯಪಾನ ಮಾಡುತ್ತಿದ್ದರು ಎಂದು ನಾನು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ಮಧ್ಯಪಾನ ಮಾಡುವಾಗ 1 ನೇ ಆರೋಪಿಯ ಮೊಬೈಲ್ ಫೋನ್ ಅನ್ನು ಯಾರೋ ತೆಗೆದುಕೊಂಡರು ಎಂದು 1 ನೇ ಆರೋಪಿ ಜಗಳ ಆಡಿರುವುದಾಗಿ ಸಾಕ್ಷಿ ನುಡಿದಿದ್ದು ಅದನ್ನು ನಾನು ಖುದ್ದಾಗಿ ನೋಡಿಲ್ಲ. ನಾನು ಸದರಿ ವಿಚಾರಗಳನ್ನು ಸ್ವತಃ ನೋಡದೇ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

2. ಚಾಸಾ.8 ರವರು ನನಗೆ ಪೋನ್ ಮಾಡಿ ನನ್ನ ಗಂಡನನ್ನು ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿರುವುದಾಗಿ ತಿಳಿಸಿದ ಕಾರಣ ನಾನು ಠಾಣೆಗೆ ಹೋಗಿದ್ದು ಪೋಲಿಸರೇ ಕರೆದುಕೊಂಡು ಹೋಗಿದ್ದರು ಎಂದು ಹೇಳಿದ್ದ ಕಾರಣ ಇದರ ಬಗ್ಗೆ ನಾನು ಪ್ರತ್ಯೇಕ ದೂರು ಸಲ್ಲಿಸಿಲ್ಲ. ರಾಜಗೋಪಾಲ ಪೊಲೀಸ್ ಠಾಣೆಗೆ ಚಾಸಾ.8 ಹಾಗೂ ನನ್ನ ತಾಯಿ ಹೋಗಿ ವಿಚಾರಿಸಿದ್ದರು ಎಂದರೆ ಸರಿ. ಠಾಣೆಯಲ್ಲಿ ಚಾಸಾ.8 ಹಾಗೂ ನನ್ನ ತಾಯಿ ಪ್ರಸನ್ನ ಕುಮಾರ್ ಎಂಬುವವರನ್ನು ಕರೆದುಕೊಂಡು ಬಂದಿರುತ್ತೀರಾ ಎಂದು ಪೊಲೀಸರ ಬಳಿ ಕೇಳಿರುತ್ತಾರೆ. ಆಗ ಪೊಲೀಸರು ಆ ಹೆಸರಿನ ವ್ಯಕ್ತಿಯನ್ನು ಯಾರನ್ನು ಕರೆದುಕೊಂಡು ಬಂದಿಲ್ಲ, ಠಾಣೆಯಲ್ಲಿ ಕೆಲವರನ್ನು ಕೂರಿಸಿದ್ದು ಆ ಹೆಸರಿನ ವ್ಯಕ್ತಿ ಇರುತ್ತಾರೋ ಇಲ್ಲವೋ ಎಂದು ಬಂದು ನೋಡಲು ಹೇಳಿರುತ್ತಾರೆ. ಅದರಂತೆ ನನ್ನ ತಾಯಿ ಹಾಗೂ ಚಾಸಾ.8 ರವರು ಠಾಣೆಯ ಒಳಗೆ ಹೋಗಿ ನೋಡಿದ್ದು ಅದರಲ್ಲಿ ಕುಳಿತಿದ್ದ ವ್ಯಕ್ತಿಗಳಲ್ಲ ನನ್ನ ಯಜಮಾನರಾದ ಪ್ರಸನ್ ಕುಮಾರ್ ಇವರು ಇರಲಿಲ್ಲ. ನನ್ನ ಯಜಮಾನರನ್ನು ಪೊಲೀಸರು ಕರೆದುಕೊಂಡು ಹೋದ ಬಗ್ಗೆ ಪೋನ್ ಮೂಲಕ ತಿಳಿಸಿದ ಕಾರಣ ಪೊಲೀಸರ ಬಳಿ ಕೇಳಲು ಬಂದಿರುವುದಾಗಿ ಚಾಸಾ.8 ಹಾಗೂ ನನ್ನ ತಾಯಿ ಪೊಲೀಸರಿಗೆ ತಿಳಿಸಿರುತ್ತಾರೆ.

3. ಆಗಲೂ ಸಹ ನನ್ನ ಯಜಮಾನರನ್ನು ಯಾರೋ ಕರೆದುಕೊಂಡು ಹೋಗಿದ್ದು ಅವರನ್ನು ಹುಡುಕಿ ಕೊಡುವಂತೆ ಚಾಸಾ.8 ಹಾಗೂ ನನ್ನ ತಾಯಿ ಠಾಣೆಗೆ ದೂರು ನೀಡಲಿಲ್ಲ. ಈ ವಿಚಾರವನ್ನು ಚಾಸಾ.8 ಹಾಗೂ ನನ್ನ ತಾಯಿ ನನಗೆ ತಿಳಿಸಿದ

ಕೂಡಲೇ ನಾನು ಠಾಣೆಗೆ ಹೋಗಿ ಯಾವುದೇ ದೂರನ್ನು ದಾಖಲಿಸಲಿಲ್ಲ. ನನ್ನ ಯಜಮಾನರು ಆಗಾಗ ಕಾಣೆಯಾಗುತ್ತಿದ್ದು ಅವರು ಮಧ್ಯಪಾನ ಚಟದಿಂದ ಬೀದಿಯಲ್ಲಿ ಬೀಳುತ್ತಿದ್ದು ಮಧ್ಯಪಾನ ಮಾಡಿ 2-3 ದಿವಸಗಳ ಕಾಲ ಮನೆಗೆ ಬಾರದಿದ್ದ ಕಾರಣ ನಾನು ತಕ್ಷಣ ಹೋಗಿ ದೂರು ದಾಖಲಿಸಲಿಲ್ಲ ಎಂದರೆ ಸರಿಯಲ್ಲ. ನನಗೆ ದೂರು ಸಲ್ಲಿಸುವ ಅವಕಾಶ ಇದ್ದರೂ ಸಹ ನಾನು ದೂರು ನೀಡಲಿಲ್ಲ ಎಂದರೆ ಸರಿ.

4. ಚಾಸಾ.8 ರವರಿಗೆ ಯಾರೋ ವ್ಯಕ್ತಿ ಫೋನ್ ಮಾಡಿ ಮೊಬೈಲ್ ವಿಚಾರವಾಗಿ ಹಣ ಕೊಡುವಂತೆ ಕೇಳಿದ ವ್ಯಕ್ತಿಯ ಮೊಬೈಲ್ ನಂಬರ್ ಅನ್ನು ನಾನು ಪೊಲೀಸರಿಗೆ ತಿಳಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಪೊಲೀಸರು ಏನಾದರೂ ಕ್ರಮ ಜರುಗಿಸಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಆ ರೀತಿ ಯಾವುದೇ ಫೋನ್ ಚಾಸಾ.8 ರವರಿಗೆ ಬಂದಿರಲಿಲ್ಲ, ಸದರಿ ವ್ಯಕ್ತಿಯ ಫೋನ್ ನಂಬರ್ ಅನ್ನು ನಾನು ಪೊಲೀಸರಿಗೆ ತಿಳಿಸದೇ ಇರುವ ಕಾರಣ ಅದರ ಬಗ್ಗೆ ಪೊಲೀಸರು ಯಾವುದೇ ಕ್ರಮವನ್ನು ಜರುಗಿಸಲಿಲ್ಲ ಎಂದರೆ ಸರಿಯಲ್ಲ. ನಂತರ ದಿಃ17.02.2020 ರಂದು ನನ್ನ ತಮ್ಮನಾದ ಚಾಸಾ.5 ರವರು ನನಗೆ ಫೋನ್ ಮಾಡಿ ವಿಚಾರ ತಿಳಿಸಿರುತ್ತಾರೆ. ಈ ರೀತಿ ನನ್ನ ತಮ್ಮನಿಗೆ ಫೋನ್ ಮಾಡಿ ಹಣ ಕೊಟ್ಟಲ್ಲಿ ನನ್ನ ಗಂಡ, ಚಾಸಾ.1, 2 ರವರನ್ನು ಬಿಡುವುದಾಗಿ ತಿಳಿಸಿದ ವಿಚಾರವಾಗಿ ನಾನಾಗಲೀ ಅಥವಾ ಚಾಸಾ.5 ರವರಾಗಲೀ ಪೊಲೀಸರಿಗೆ ದೂರು ದಾಖಲಿಸಲಿಲ್ಲ. ಚಾಸಾ.5 ರವರು ಸದರಿ ಸ್ಥಳಕ್ಕೆ ಆಟೋದಲ್ಲಿ ಹೋದದ್ದನ್ನು ನಾನು ಸ್ವತಃ ನೋಡಿರುವುದಿಲ್ಲ. ಚಾಸಾ.5 ರವರು

ಸ್ಥಳಕ್ಕೆ ಹೋದಾಗ ನನ್ನ ಗಂಡ, ಚಾಸಾ.1 ಮತ್ತು 2 ರವರಿಗೆ ಆ ವ್ಯಕ್ತಿಗಳು ಹೊಡೆದಿದ್ದು ನನ್ನ ಗಂಡ ತುಂಬಾ ಸುಸ್ತಾಗಿದ್ದು ಆ ವ್ಯಕ್ತಿಗಳು ಹಣ ಕೊಡದಿದ್ದಲ್ಲಿ, ಪೊಲೀಸರಿಗೆ ವಿಚಾರ ತಿಳಿಸಿದ್ದಲ್ಲಿ ನನ್ನ ಗಂಡನನ್ನು ಕೊಂದು ಹಾಕುವುದಾಗಿ ಚಾಸಾ.5 ರವರು ತಿಳಿಸಿದ್ದು ಅದನ್ನು ನಾನು ಸ್ವತಃ ನೋಡಿರುವುದಿಲ್ಲ.

5. ನಂತರ ನಾನು ಹಾಗೂ ಚಾಸಾ.5 ರವರು ಅಂಜನಾ ನಗರಕ್ಕೆ ರಾತ್ರಿ 9.00 ಗಂಟೆಗೆ ಹೋಗಿ ಹುಡುಕಿದಾಗ ನನ್ನ ಗಂಡ ಸಿಗದಿದ್ದ ಬಗ್ಗೆ ನಾನು ಪೊಲೀಸರಿಗೆ ದೂರು ದಾಖಲಿಸಿರುವುದಿಲ್ಲ. ಆ ಸಮಯದಲ್ಲಿ ಪೊಲೀಸರಿಗೆ ದೂರು ದಾಖಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಯಜಮಾನರಿಗೆ ಮಧ್ಯಪಾನದ ಚಟ ಇದ್ದು ಮಧ್ಯಪಾನ ಮಾಡಿ ದಾರಿಯಲ್ಲಿ ಬೀಳುತ್ತಿದ್ದು 2-3 ದಿವಸ ಆದರೂ ಸಹ ಮನೆಗೆ ವಾಪಸ್ ಬರದೇ ಇದ್ದ ಕಾರಣ ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ದೂರು ನೀಡಲು ತಕ್ಷಣ ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ನಾವು ಅಂಜನಾ ನಗರದಲ್ಲಿ ರಾತ್ರಿ ವೇಳೆ ನನ್ನ ಗಂಡನನ್ನು ಹುಡುಕಿ ವಾಪಸ್ ಬಂದ ನಂತರವೂ ಸಹ ನನ್ನ ಗಂಡ ಮನಗೆ ಆ ದಿನ ರಾತ್ರಿ ಅಥವಾ ಮಾರನೇ ದಿನ ಬೆಳಿಗ್ಗೆ ಮನೆಗೆ ಬಂದಿಲ್ಲ. ಮಾರನೇ ದಿನ ಬೆಳಿಗ್ಗೆ 9.00 ಗಂಟೆಗೆ ಅಂದರೆ ದಿಃ18.02.2020 ರಂದು ನಾವು ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದೇವು.

6. ದಿಃ18.02.2020 ರಂದು ನಾನು ಪೊಲೀಸ್ ಠಾಣೆಗೆ ಹೋಗಿ

ಯಾವುದೇ ದೂರು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಗೆ ಹೋದಾಗ ಒಬ್ಬ ಪೊಲೀಸ್ ಠಾಣೆಯ ಅಧಿಕಾರಿಯ ಬಳಿ ಹೋಗಿದ್ದು ಅವರ ಹೆಸರು ನನಗೆ ತಿಳಿದಿಲ್ಲ. ಆ ದಿನ ಪೊಲೀಸರಿಗೆ ನೀಡಿದ ದೂರಿನಲ್ಲಿ ನನ್ನ ಯಜಮಾನರು ದಿಃ14.02.2020 ರಿಂದ ಇಲ್ಲಿಯವರೆಗೂ ಮನೆಗೆ ವಾಪಸ್ ಬಂದಿಲ್ಲ, ಇಲ್ಲಿಯವರೆಗೂ ವಾಪಸ್ ಬರಬಹುದು ಎಂಬ ಕಾರಣಕ್ಕಾಗಿ ದೂರು ನೀಡಿಲ್ಲ ಎಂದು ಹೇಳಿ ದೂರು ಸಲ್ಲಿಸಿರುತ್ತೇನೆ. ನಾನು ದೂರು ನೀಡಿದ ತಕ್ಷಣ ಪೊಲೀಸರು ಪ್ರಕರಣ ನೊಂದಾಯಿಸಿ ನನಗೆ ಪ್ರ.ವ.ವ ಕಾಪಿ ನೀಡಿದ್ದು ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನನ್ನ ಯಜಮಾನರು ಕಾಣೆಯಾದ ಬಗ್ಗೆ ನಾನು ದೂರು ದಾಖಲಿಸಿಲ್ಲ, ಪೊಲೀಸರು ಯಾವುದೇ ಪ್ರ.ವ.ವ ನೊಂದಾಯಿಸಿಲ್ಲ, ಅದರ ಕಾಪಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿಃ18.02.2020 ರಂದು ನಮ್ಮ ಮನೆಯ ಅಕ್ಕ ಪಕ್ಕದ ಬಡಾವಣೆಗಳಲ್ಲಿ ಹಾಗೂ ನಂದಿನಿ ಲೇಔಟ್ ನಲ್ಲಿ ನನ್ನ ಗಂಡನನ್ನು ಬೆಳಿಗ್ಗೆ 9.00 ರಿಂದ 9.30 ರ ಸಮಯದಲ್ಲಿ ಹುಡುಕಿರುತ್ತೇನೆ. ಆ ದಿನ ನನ್ನ ಜೊತೆ ನನ್ನ ತಮ್ಮನಿದ್ದು ನನ್ನ ತಾಯಿ ಜೊತೆ ನನ್ನ ನಾದಿನಿ ಹಾಗೂ ನನ್ನ ಅತ್ತೆ ಸೇರಿ ಹುಡುಕಿರುತ್ತೇವೆ.

7. ಅದೇ ದಿನ ಬೆಳಿಗ್ಗೆ 10.00 ರಿಂದ 10.30 ರ ಸಮಯದಲ್ಲಿ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಹಿಂಭಾಗದ ಜಾಗದಲ್ಲಿ ಮುತ್ತಿನ ಪಾಳ್ಯ ರಸ್ತೆಯಲ್ಲಿ ನನ್ನ ಗಂಡನನ್ನು ಹುಡುಕುತ್ತಿದ್ದೇವು. ಮೊದಲಿಗೆ ನನ್ನ ಗಂಡನ ಮೃತ ದೇಹವನ್ನು ನನ್ನ

ತಮ್ಮ, ಪೊಲೀಸರು ಹಾಗೂ ಅವರ ಜೊತೆ ಬಂದವರು ನೋಡಿರುತ್ತಾರೆ. ಆ ಸಮಯದಲ್ಲಿ ನಮ್ಮ ಜೊತೆ ಯಾರು ಪೊಲೀಸರು ಇಲ್ಲದಿದ್ದರೂ ಸಹ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಶವ ಮಕಾಡೆ ಬಿದ್ದಿದ್ದು ಸಾಕಷ್ಟು ಪೆಟ್ಟಾಗಿದ್ದು ದೇಹ ಹಸಿರು ಬಣ್ಣಕ್ಕೆ ತಿರುಗಿದ್ದು ಅದನ್ನು ನಾನು ಖುದ್ದಾಗಿ ನೋಡಿರುತ್ತೇನೆ. ನನ್ನ ಯಜಮಾನರು ಮಧ್ಯಪಾನ ಚಟ ಹೊಂದಿದ್ದು ಅದೇ ಚಟದಿಂದ ಆತನ ಮೃತದೇಹ ಸದರಿ ಸ್ಥಳದಲ್ಲಿ ಪತ್ತೆಯಾಗಿದ್ದು ಅದಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಗಂಡನ ಜೊತೆ ಹೋಗುತ್ತಿದ್ದುದ್ದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ನನ್ನ ಗಂಡನ ಸಾವಿಗೆ ಆರೋಪಿತರು ಯಾರು ಕಾರಣರಲ್ಲ ಎಂದರೆ ಸರಿಯಲ್ಲ. ನಾನು ಕಾನೂನು ಬಾಹಿರವಾಗಿ ಹಣ ಪಡೆಯುವ ಉದ್ದೇಶದಿಂದ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.